
# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 4

ಸ್ವಾಮಿ ನಿತ್ಯಸ್ಥಾನಂದ



## ನಿಜವಾದ ಕಲಿಕೆ

‘ಮ’ ಶ್ರೀರಾಮಕೃಷ್ಣರ ಮಾತುಗಳನ್ನು ಮಂತ್ರಮುಗ್ಧನಾಗಿ ಕೇಳುತ್ತಿದ್ದರು. ಸ್ವಲ್ಪ ಹೊತ್ತಿನ ಮೇಲೆ ಅವರಿಗನ್ನಿಸಿತು, ದಕ್ಷಿಣೇಶ್ವರದ ಈ ರಮಣೀಯವಾದ ದೇವಾಲಯ ಸಂಕೀರ್ಣವನ್ನು ಒಮ್ಮೆ ನೋಡಿಕೊಂಡು ಬರೋಣ ಎಂದು. ಸಿಧು ಮತ್ತು ಅವರು ದೇವಾಲಯಗಳನ್ನೆಲ್ಲ ಸಂದರ್ಶಿಸಿ ಮತ್ತೆ ಶ್ರೀರಾಮಕೃಷ್ಣರ ಕೊಠಡಿಗೆ ಬಂದರು. ಕೊಠಡಿಯ ಬಾಗಿಲು ಮುಚ್ಚಿತ್ತು. ಧೂಪದ ಸುಗಂಧ ಎಲ್ಲೆಡೆ ಪಸರಿಸಿತ್ತು. ಹತ್ತಿರದಲ್ಲಿದ್ದ ಸೇವಕಿ ಬೃಂದೆಯನ್ನು ಪರಮಹಂಸರು ಒಳಗಿರುವರೇ, ಎಂದು ವಿಚಾರಿಸಿದಾಗ ಆಕೆ ಹೌದೆಂದಳು. ‘‘ಇವರೇನು ಬಹಳ ಗ್ರಂಥ ಓದಿರುವರೆ?’’ ಎಂದು ಕೇಳಿದಾಗ ಆಕೆ ಹೇಳಿದಳು, ‘‘ಗ್ರಂಥಗಳೇ! ಎಲ್ಲ ಇವರ ಬಾಯಲ್ಲೆ!’’ ಎಂದು. ‘ಮ’ಗೆ ಆಶ್ಚರ್ಯವಾಯಿತು. ಗ್ರಂಥಾಧ್ಯಯನ ಮಾಡದೆ ಜ್ಞಾನಿಗಳಾಗಲು ಸಾಧ್ಯವೆ? ಸಾಮಾನ್ಯ ಗ್ರಹಿಕೆ ಏನೆಂದರೆ, ಓದು ಬರಹ ಗೊತ್ತಿರಬೇಕು, ಶಾಲಾ ಕಾಲೇಜುಗಳಿಂದ ಡಿಗ್ರಿ ಪಡೆದಿರಬೇಕು ಆಗಲೇ ಒಬ್ಬ ವಿದ್ಯಾವಂತ. ಕಲಿಕೆಯಲ್ಲಿ ಎರಡು ವಿಧ: ಒಂದು ಶಾಸ್ತ್ರೀಯ (academic learning), ಇನ್ನೊಂದು ಸ್ವಾಭಾವಿಕ (natural learning). ಶಾಲಾ ಕಾಲೇಜುಗಳಿಂದಲೂ ಶಾಸ್ತ್ರಾಧ್ಯಯನದಿಂದಲೂ ವಿವಿಧ ಜ್ಞಾನಗಳನ್ನು ಗಳಿಸುವುದು ಮೊದಲನೆಯದು. ಇದಾವುದೂ ಇಲ್ಲದೆ ಸ್ವಾಭಾವಿಕವಾಗಿಯೇ ತಮ್ಮ ತಮ್ಮ ಅನುಭವಗಳ ಮೂಲಕ, ತೀಕ್ಷ್ಣ ವೀಕ್ಷಣೆಯ ಮೂಲಕ ತೆರೆದ ಮನಸ್ಸಿನಿಂದ ಕಲಿಯುವುದೊಂದಿದೆ. ಇವೆರಡೂ ಇದ್ದರೆ ಒಳ್ಳೆಯದು, ಒಂದೇ ಇರುವುದಾದರೆ ಎರಡನೆಯದೇ ಒಳ್ಳೆಯದು. ಶ್ರೀರಾಮಕೃಷ್ಣರಿಗೆ ಎರಡನೆಯದೇ ಪ್ರಧಾನವಾಗಿತ್ತು. ಅವರು ಗ್ರಂಥಾಧ್ಯಯನ ಮಾಡಿದವರಲ್ಲ, ಶಾಲಾ ಕಾಲೇಜುಗಳಲ್ಲಿ ಪುಸ್ತಕಗಳ ಹೊರೆಯನ್ನು ಹೊತ್ತವರಲ್ಲ. ಅವರಲ್ಲಿ ಸೂಕ್ಷ್ಮವಾಗಿ ವೀಕ್ಷಿಸುವ ಸಾಮರ್ಥ್ಯವಿತ್ತು, ವಿವಿಧ ಅನುಭವಗಳಿಂದ ಕಲಿಯುವ ಅಂತರ್ದೃಷ್ಟಿಯಿತ್ತು, ಮತ್ತು ‘‘ಯಾವುದನ್ನು ತಿಳಿದರೆ ಎಲ್ಲವನ್ನು ತಿಳಿದಂತಾಗುವುದೊ’’ ಆ ಆತ್ಯಂತಿಕ ಸತ್ಯದ ಅನುಭವಾತ್ಮಕ ಜ್ಞಾನ ಅವರಿಗಿತ್ತು.

ಒಂದು ಸಂಸ್ಕೃತ ಸುಭಾಷಿತ ಶ್ಲೋಕ ಕಲಿಕೆಯ ಬಗ್ಗೆ ಹೀಗೆ ಹೇಳುತ್ತದೆ:

**ಆಚಾರ್ಯಾತ್ ಪಾದಮೇಕಂ ಸ್ಯಾತ್ ಪಾದಂ ಸಬ್ರಹ್ಮಚಾರಿಭಿಃ।**
**ಪಾದಂ ಸ್ವಮೇಧಯಾ ಜ್ಞೇಯಂ ಶೇಷಂ ಕಾಲೇನ ಪಚ್ಯತೇ ॥**

‘‘ಜ್ಞಾನದ ಕಾಲು ಭಾಗವನ್ನು ಆಚಾರ್ಯನಿಂದ ಪಡೆಯಬೇಕು, ಇನ್ನು ಕಾಲುಭಾಗವನ್ನು ಸಹ ವಿದ್ಯಾರ್ಥಿಗಳೊಡನೆ ಚರ್ಚಿಸುವುದರ ಮೂಲಕ ಕಲಿಯಬೇಕು, ಮತ್ತೆ ಕಾಲು ಭಾಗವನ್ನು ತನ್ನ ಬುದ್ಧಿಶಕ್ತಿಯಿಂದಲೇ ತಿಳಿದುಕೊಳ್ಳಬೇಕು, ಮತ್ತು ಉಳಿದ ಕಾಲುಭಾಗವು ಕ್ರಮೇಣ ಅನುಭವದ ಮೂಲಕ ಪ್ರಾಪ್ತವಾಗುತ್ತದೆ.’’ ನಮ್ಮಲ್ಲಿ ಉಪಾಧ್ಯಾಯರಿಂದ ಕಲಿಯುವ ಶ್ರದ್ಧೆಯೂ ಇತರರಿಂದ ಕಲಿಯುವ ಸೌಜನ್ಯವೂ ಸ್ವತಂತ್ರವಾಗಿ ಕಲಿಯುವ ಬುದ್ಧಿಶಕ್ತಿಯೂ ಹಾಗೂ ಅನುಭವದಿಂದ ಕಲಿಯುವ ಸಾಮರ್ಥ್ಯವೂ ಇರಬೇಕು. ಶ್ರೀರಾಮಕೃಷ್ಣರಲ್ಲಿ ಇವೆಲ್ಲವನ್ನೂ ಕಾಣುತ್ತೇವೆ.

ಸರ್ವಶಾಸ್ತ್ರಗಳನ್ನೂ ಅಧ್ಯಯನ ಮಾಡಿ ಬ್ರಹ್ಮತತ್ತ್ವವನ್ನೇ ತಿಳಿಯದಿದ್ದರೆ ಏನು ಪ್ರಯೋಜನ ಎಂದು ಇನ್ನೊಂದು ಶ್ಲೋಕವು ಹಂಗಿಸುತ್ತದೆ:

**ಅಧೀತ್ಯ ಚತುರೋ ವೇದಾನ್ ಧರ್ಮಶಾಸ್ತ್ರಾಣ್ಯನೇಕಧಾ ।**
**ಬ್ರಹ್ಮತತ್ತ್ವಂ ನ ಜಾನಾತಿ ದರ್ವೀ ಪಾಕರಸಂ ಯಥಾ ॥**

''ನಾಲ್ಕು ವೇದಗಳನ್ನು ಅನೇಕ ಧರ್ಮಶಾಸ್ತ್ರಗಳನ್ನೂ ಅಧ್ಯಯನ ಮಾಡಿ ಬ್ರಹ್ಮತತ್ತ್ವವನ್ನೇ ತಿಳಿಯದಿದ್ದರೆ ಅಡಿಗೆಯ ರುಚಿಯನ್ನು ಅನುಭವಿಸದ ಸೌಟಿನಂತೆ.'' ಶಾಸ್ತ್ರಾಧ್ಯಯನವೂ ಒಂದು ವಾಸನೆಯಾಗಿಬಿಡುತ್ತದೆ. ಮೂರು ಬಗೆಯ ವಾಸನೆ ಗಳಿವೆಯೆಂದು ಶ್ರೀಶಂಕರಾಚಾರ್ಯರು ಹೇಳುತ್ತಾರೆ:

**ಲೋಕವಾಸನಯಾ ಜಂತೋಃ ಶಾಸ್ತ್ರವಾಸನಯಾಽಪಿ ಚ ।**
**ದೇಹವಾಸನಯಾ ಜ್ಞಾನಂ ಯಥಾವತ್ ನೈವ ಜಾಯತೇ ॥**

*(ವಿವೇಕಚೂಡಾಮಣಿ, ೨೭೦)*

''ಲೋಕವಾಸನೆಯಿಂದಲೂ (ಹೆಸರು ಕೀರ್ತಿ ಮುಂತಾದವುಗಳ ಆಸೆ), ಶಾಸ್ತ್ರವಾಸನೆಯಿಂದಲೂ ಮತ್ತು ದೇಹವಾಸನೆಯಿಂದಲೂ (ದೇಹ ಸುಖದ ಆಸಕ್ತಿ) ಮನುಷ್ಯನಿಗೆ ಜ್ಞಾನವು ಯಥಾರ್ಥವಾಗಿ ಉಂಟಾಗುವುದಿಲ್ಲ.''

ವಿದ್ಯಾರಣ್ಯರು ತಮ್ಮ 'ಜೀವನ್ಮುಕ್ತಿವಿವೇಕ' ಎಂಬ ಗ್ರಂಥದಲ್ಲಿ ಮೂರು ಬಗೆಯ ಶಾಸ್ತ್ರವಾಸನೆಗಳನ್ನು ಗುರುತಿಸುತ್ತಾರೆ *(ಪು.೧೨೫, ಪ್ರಕಟಣೆ: ಶ್ರೀರಾಮಕೃಷ್ಣ ಆಶ್ರಮ, ಮೈಸೂರು)* ಪಾಠವ್ಯಸನ, ಬಹುಶಾಸ್ತ್ರವ್ಯಸನ ಮತ್ತು ಅನುಷ್ಠಾನ ವ್ಯಸನ. ಪಾಠವ್ಯಸನವೆಂದರೆ, ವಿವಿಧ ಶಾಸ್ತ್ರಗಳ ಕಂಠಪಾಠದಲ್ಲೇ ಆಸಕ್ತನಾಗಿರುವುದು, ಅವುಗಳ ಅರ್ಥವನ್ನು ತಿಳಿಯುವುದರಲ್ಲಾಗಲಿ, ಅದನ್ನು ಅನುಸರಿಸುವುದರಲ್ಲಾಗಲಿ ಆಸಕ್ತಿಯಿಲ್ಲದಿರುವುದು. ಉಪನಿಷತ್ತು, ಭಗವದ್ಗೀತೆ, ಭಾಗವತ ಮುಂತಾದವುಗಳು ಅವನ ನಾಲಿಗೆಯ ತುದಿಯಲ್ಲೇ ಇರುತ್ತವೆ. ಬ್ರಹ್ಮಶಾಸ್ತ್ರ ವ್ಯಸನವೆಂದರೆ, ಅನೇಕ ಗ್ರಂಥಗಳನ್ನು ಓದಿ ವಿಷಯಸಂಗ್ರಹದ ಹುಚ್ಚು, ಚಲಿಸುವ ವಿಶ್ವಕೋಶದಂತಿರಬೇಕೆಂಬ ಹಂಬಲ. ಇದೊಂದು ಬಗೆಯ ಜೀವನಾದರ್ಶವಿಲ್ಲದ ಪಾಂಡಿತ್ಯಾಭಿಮಾನ. ಇನ್ನು ಕೆಲವರು ಶಾಸ್ತ್ರಗಳಲ್ಲಿ ಹೇಳಿರುವ ಕ್ರಿಯಾವಿಧಿಗಳನ್ನು ಆಚರಿಸುವುದರಲ್ಲಿ ತನ್ಮಯರಾಗುತ್ತಾರೆ (addicted to rituals). ಅವನ್ನು ಬಿಟ್ಟರೆ ಏನೋ ಒಂದನ್ನು ಕಳೆದುಕೊಂಡಂತೆ ಅವರಿಗೆ ಅನ್ನಿಸುತ್ತದೆ. ಇದೇ ಅನುಷ್ಠಾನವ್ಯಸನ. ತಮ್ಮ ಜೀವನ ಪರಿವರ್ತನೆಯ ಕಡೆ ಅವರ ಗಮನವಿರುವುದಿಲ್ಲ. ''ಅಡಿಗೆಯ ಪಟ್ಟಿ ಎಷ್ಟೇ ಚೆನ್ನಾಗಿದ್ದರೂ ಅದು ನಮ್ಮ ಹಸಿವನ್ನು ನೀಗಿಸುವುದಿಲ್ಲ'' (However good the menu is, it cannot appease our hunger) ಎಂಬ ಆಂಗ್ಲ ನುಡಿಯೊಂದಿದೆ. ಹಾಗೆಯೇ ಕೇವಲ ಶಾಸ್ತ್ರಾಧ್ಯಯನದಿಂದ ಅಂತರಂಗದ ಹಸಿವು ನೀಗುವುದಿಲ್ಲ.

'ಮ' ಮತ್ತು ಸಿಧು ಕೊಠಡಿಯನ್ನು ಪ್ರವೇಶಿಸುತ್ತಾರೆ. ಪರಮಹಂಸರೊಬ್ಬರೇ ಕುಳಿತಿದ್ದರು. ಎಲ್ಲಿಂದ ಬರುತ್ತಿರುವಿರಿ ಎಂದು ಮುಂತಾಗಿ ವಿಚಾರಿಸಿದರು. 'ಮ' ಸೂಕ್ತ ಉತ್ತರವನ್ನು ನೀಡಿದರು. ''ಆದರೆ ಆಗಾಗ ಪರಮಹಂಸರು ಅನ್ಯಮನಸ್ಕರಾಗುತ್ತಿದ್ದುದು ಆತನ ಮನಸ್ಸಿಗೆ ಬಂತು. ಅದಕ್ಕೆ 'ಭಾವ' ಅಂತ ಹೆಸರು ಎಂಬುದನ್ನು ಕ್ರಮೇಣ ಅರಿತುಕೊಂಡ. ಅದು ಗಾಳ ಹಾಕಿ ಮೀನು ಹಿಡಿಯಲು ಕುಳಿತಿರುವವನ ಅವಸ್ಥೆಯ ಹಾಗೆ. ಮೀನು ಎರೆ ತಿನ್ನಲು ಆರಂಭಿಸಿದಾಗ ಬೆಂಡು ಅಲುಗಲು ಆರಂಭಿಸುತ್ತದೆ. ಮೀನು ಹಿಡಿಯುವವ ಬಹಳ ಎಚ್ಚರಿಕೆಯಿಂದ ಗಾಳದ ಕಡ್ಡಿಯನ್ನು ಬಲವಾಗಿ ಹಿಡಿದು ಆ ಬೆಂಡಿನ ಕಡೆಗೇ ಏಕಾಗ್ರಚಿತ್ತನಾಗಿ ನೋಡುತ್ತಿರುತ್ತಾನೆ. ಆಗ ಆತ ಬೇರೆ ಯಾರೊಡನೆಯೂ ಮಾತನಾಡಲೊಲ್ಲ. ಪರಮಹಂಸರದೂ ಅದೇ ತರದ ಮಾನಸಿಕ ಅವಸ್ಥೆ.'' ಶ್ರೀರಾಮಕೃಷ್ಣರು ವಿವಿಧ ಅವಸ್ಥೆಗಳಲ್ಲಿ ಇರುತ್ತಿದ್ದರು. ಅವರು ಬಾಹ್ಯದಶೆಯಲ್ಲಿ ಇದ್ದಾಗ ಭಕ್ತರೊಡನೆ ಮಾತನಾಡುತ್ತಿದ್ದರು, ವ್ಯವಹರಿಸುತ್ತಿದ್ದರು. ಅರ್ಧ ಬಾಹ್ಯದಶೆಯಲ್ಲಿರುವಾಗ ಅಂತರ್ಮುಖಿಗಳಾಗುತ್ತಿದ್ದರು ಅಥವಾ ಅನ್ಯಮನಸ್ಕರಾಗುತ್ತಿದ್ದರು. ಈ ಅವಸ್ಥೆಯಲ್ಲಿ ಅವರಿಗೆ ಹೊರಗಿನ ಅರಿವಿದ್ದರೂ ಅದರ ಕಡೆ ಗಮನಕೊಡಲಾಗುತ್ತಿರಲಿಲ್ಲ.

ಇಂದ್ರಿಯ ಮನಸ್ಸುಗಳು ಕೆಲಸ ಮಾಡುತ್ತಿದ್ದರೂ ಹೊರ ಪ್ರಪಂಚ ತನ್ನ ಅರ್ಥವನ್ನು ಕಳೆದುಕೊಂಡಿರುತ್ತದೆ, ಜಗತ್ತು ನೆರಳಿನಂತಾಗಿರುತ್ತದೆ. ಸೂರ್ಯನು ನೆತ್ತಿಗೆ ಬಂದಾಗ ನೆರಳಿರುವುದಿಲ್ಲ. ದೂರವಾದಷ್ಟೂ ನೆರಳು ದೊಡ್ಡದಾಗುತ್ತದೆ. ರಾತ್ರಿಯಲ್ಲಿಯೂ ನೆರಳಿರುವುದಿಲ್ಲ. ಮಧ್ಯಾಹ್ನವನ್ನು ಸಮಾಧಿಯ ಸ್ಥಿತಿಗೆ ಹೋಲಿಸಬಹುದು. ಅಲ್ಲಿ ನಾನಿಲ್ಲದಂತಾಗಿರುತ್ತೇನೆ, ಆದ್ದರಿಂದ ನೆರಳಿಲ್ಲ. ನಡುರಾತ್ರಿ ಸುಷುಪ್ತಿಯ ಸ್ಥಿತಿಯಂತೆ — ಅಲ್ಲಿ ನಾನೂ ಇಲ್ಲ, ನೆರಳೂ ಇಲ್ಲ.

ಮೇಲಿನ ಉದಾಹರಣೆಯಲ್ಲಿ , ಮೀನುಹಿಡಿಯುವವನು ಬೇರೆ ಶಬ್ದಗಳನ್ನು ಕೇಳುತ್ತಿದ್ದರೂ ಅದರ ಕಡೆ ಗಮನಕೊಡುತ್ತಿರಲಿಲ್ಲ. ಧ್ಯಾನಾವಸ್ಥೆಯಲ್ಲಿಯೂ ನಾವು ಹೀಗಿರಬೇಕು. ಧ್ಯೇಯ ವಸ್ತುವಿನಲ್ಲಿ ಮನಸ್ಸು ಏಕಾಗ್ರಗೊಂಡಿದ್ದು, ಬೇರೆ ಶಬ್ದ ಕೇಳಿದರೆ, ಬೇರೆ ಆಲೋಚನೆ ಬಂದರೆ ಮನಸ್ಸು ಅದರ ಹಿಂದೆ ಹೋಗದಂತೆ ನೋಡಿಕೊಳ್ಳಬೇಕು. ಅಂದರೆ ಜಾಗೃತರಾಗಿರಬೇಕು. ಧ್ಯಾನವು ಜಾಗೃತಾವಸ್ಥೆಗಿಂತಲೂ ಜಾಗೃತ ಸ್ಥಿತಿ. ಶ್ರೀರಾಮಕೃಷ್ಣರು ಸಂಪೂರ್ಣ ಅಂತರ್ಮುಖಿಗಳಾದಾಗ ಭಾವಾವಸ್ಥೆಯನ್ನು ತಲುಪುತ್ತಿದ್ದರು, ಬಾಹ್ಯವಿಷಯಗಳ ಅರಿವಾಗುತ್ತಿರಲಿಲ್ಲ. ಇನ್ನೂ ಮೇಲಿನ ಅವಸ್ಥೆ ಮಹಾಭಾವ. ಅಲ್ಲಿ ಅವರು ಸಮಾಧಿಮಗ್ನರಾಗುತ್ತಿದ್ದರು, ತಮ್ಮನ್ನೇ ಕಳೆದುಕೊಳ್ಳುತ್ತಿದ್ದರು.

ಶ್ರೀರಾಮಕೃಷ್ಣರು ಈ ರೀತಿ ಅನ್ಯಮನಸ್ಕರಾಗಿದ್ದುದನ್ನು ಕಂಡು 'ಮ' ಅವರು ''ಬಹುಶಃ ಈಗ ನೀವು ಸಾಯಂ ಸಂಧ್ಯಾವಂದನಾದಿಗಳಲ್ಲಿ ತೊಡಗಬೇಕಾಗಿರಬಹುದು. ನಾವು ಹೋಗಿಬರಲು ಅನುಮತಿಯೆ?'' ಎಂದು ಬಹಳ ಸೌಜನ್ಯದಿಂದ ಕೇಳಿದರು. ಶ್ರೀರಾಮಕೃಷ್ಣರು, ''ಸಂಧ್ಯಾವಂದನೆಯೆ? ಇಲ್ಲ, ಅಂಥದೇನಿಲ್ಲ'' ಎಂದು ಉತ್ತರಿಸಿದರು. ಅವರು ಎಲ್ಲ

ಕ್ರಿಯಾವಿಧಿಗಳನ್ನೂ ಮೀರಿ ಹೋಗಿದ್ದರು. ಅವರು ಗಲಿತಹಸ್ತರಾಗಿದ್ದರು. ಭಗವಂತನನ್ನೇ ಪಡೆದ ಮೇಲೆ ಇನ್ನು ದೀಪದ ಆವಶ್ಯಕತೆ ಇರುತ್ತದೆಯೆ? ಶ್ರೀರಾಮಕೃಷ್ಣರ ಪಾಲಿಗೆ **ಅಕ್ರಿಯಾ ಏವ ಪರಾ ಪೂಜಾ ಮೌನಮೇವ ಪರೋ ಜಪಃ** – *(ಕುಲಾರ್ಣವ ತಂತ್ರ)* — (ಅಕ್ರಿಯೆಯೇ ಭಗವತ್ಪೂಜೆ, ಮೌನವೇ ಭಗವನ್ನಾಮ ಜಪ) ಆಗಿತ್ತು. ಮುಂದೆ ಸ್ವಲ್ಪ ಮಾತುಕತೆಯಾದ ಬಳಿಕ 'ಮ' ಮತ್ತು ಸಿಧು ಅವರಿಂದ ಬೀಳ್ಕೊಂಡರೂ, ಹೊರಡುವಾಗ ''ಮತ್ತೆ ಬನ್ನಿ'' ಎಂಬ ಮಾತಿನ ಮೋಡಿಯ ಮೂಲಕ 'ಮ' ಮೇಲೆ ಪ್ರೀತಿಯ ಬಲೆಯನ್ನು ಬೀಸಿಬಿಟ್ಟರು. ಇನ್ನು 'ಮ'ಗೆ ಆ ಆಕರ್ಷಣೆಯ ಬಂಧನದಿಂದ ತಪ್ಪಿಸಿಕೊಳ್ಳಲಾದೀತೆ? ಅವರು ಹಿಂದಿರುಗುವಾಗ ಮತ್ತೆ ಯಾವಾಗ ಬಂದು ಭೇಟಿಯಾಗುವುದು ಎಂದು ಮೆಲುಕುಹಾಕುತ್ತಿದ್ದರು. ಇಷ್ಟೊಂದು ಆಕರ್ಷಿಸುತ್ತಿರುವ ಈ ಸರಳ ವ್ಯಕ್ತಿ ಯಾರು, ಪುಸ್ತಕ ಓದದೆ ಮನುಷ್ಯ ದೊಡ್ಡವನಾಗಬಲ್ಲನೆ ? ಎಂದೆಲ್ಲ ಯೋಚಿಸತೊಡಗಿದರು.

'ಮ' ಅವರಿಗೆ ಶ್ರೀರಾಮಕೃಷ್ಣರ ಎರಡನೆಯ ಭೇಟಿ ಅವರ ಕೊಠಡಿಯ ಆಗ್ನೇಯ ಜಗಲಿಯ ಮೇಲೆ ಆಯಿತು. ಬೆಳಗ್ಗೆ ಎಂಟು ಗಂಟೆಯ ಸಮಯ. 'ಮ' ಅವರನ್ನು ಆದರದಿಂದ ಬರಮಾಡಿಕೊಂಡು, ಅವರ ಪರಿಚಯದ ಬಗ್ಗೆ ಪ್ರಶ್ನೆಗಳನ್ನು ಕೇಳಿದರು. ಅನಂತರ ಕೇಶವಚಂದ್ರಸೇನರ ಆರೋಗ್ಯದ ಬಗ್ಗೆ ವಿಚಾರಿಸಿದರು. ಇವರು ಬ್ರಹ್ಮಸಮಾಜದ ನಾಯಕರು, ಪ್ರಸಿದ್ಧ ವಾಗ್ಮಿ, ದೇಶವಿದೇಶಗಳಲ್ಲೆಲ್ಲ ಅವರ ಕೀರ್ತಿ ಹರಡಿತ್ತು. ಅಂಥವರು ಶ್ರೀರಾಮಕೃಷ್ಣರ ಪದತಲದಲ್ಲಿ ಕುಳಿತು ಮಂತ್ರಮುಗ್ಧರಾಗಿ ಅವರ ಮಾತುಗಳನ್ನು ಆಲಿಸುತ್ತಿದ್ದರು. ಶ್ರೀರಾಮಕೃಷ್ಣರಿಗೆ ಅವರ ಮೇಲೆ ತುಂಬ ಪ್ರೀತಿ. ಕೇಶವರಿಗೆ ಗುಣವಾದರೆ ಭಗವತಿಗೆ ಎಳನೀರು, ಸಕ್ಕರೆ ಅರ್ಪಿಸುವುದಾಗಿ ಹರಕೆ ಹೊತ್ತಿದ್ದರು, ಹಾಗೂ ಅವರಿಗೆ ಗುಣವಾಗಲೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತಿದ್ದರು. ಅವನು ಬದುಕದಿದ್ದರೆ ಕಲಕತ್ತಗೆ ಹೋದಾಗ ಯಾರೊಡನೆ ಮಾತನಾಡುವುದು ಎಂಬುದು ಅವರ ಚಿಂತೆ. ಇಲ್ಲಿ ನಾವು ಮೂರು ಅಂಶಗಳನ್ನು ಗಮನಿಸಬಹುದು: ಮೊದಲನೆಯದಾಗಿ ಕೇಶವಸೇನರ ಮೇಲೆ ಅವರಿಗಿದ್ದ ಅಪಾರ ಪ್ರೀತಿ; ಎರಡನೆಯದಾಗಿ ಕೇಶವಸೇನರು ತುಂಬ ಮುಂದುವರಿದ ಯಥಾರ್ಥ ಆಧ್ಯಾತ್ಮಿಕ ಸಾಧಕ; ಮತ್ತು ಮೂರನೆಯದಾಗಿ, ಶ್ರೀರಾಮಕೃಷ್ಣರ ಭಾವಪ್ರಚಾರದ ಮಾಧ್ಯಮವಾಗಿ ಕೇಶವಸೇನರ ಪಾತ್ರ ಪ್ರಮುಖವಾದುದು.

### ಸಾಂಸಾರಿಕ ಜವಾಬ್ದಾರಿ

ಹೀಗೆ ಮಾತು ಮುಂದುವರಿಯಿತು. ಶ್ರೀರಾಮಕೃಷ್ಣರು ಈಗ ಹೇಳುತ್ತಿದ್ದಾರೆ: ''ಪ್ರತಾಪನ ಸೋದರ ಇಲ್ಲಿಗೆ ಬಂದಿದ್ದ. ಕೆಲವು ದಿನ ಇದ್ದ. ಕೆಲಸವೂ ಇಲ್ಲ, ಕಾರ್ಯವೂ ಇಲ್ಲ. ಹೇಳಿದ, ಇಲ್ಲಿ ಸುಮ್ಮನೆ ಇದ್ದುಬಿಡುತ್ತೇನೆ ಅಂತ. ಹೆಂಡತಿ ಮಕ್ಕಳನ್ನೆಲ್ಲ ಮಾವನ ಮನೆಗೆ ಅಟ್ಟಿಬಿಟ್ಟಿರುವುದಾಗಿ ತಿಳಿದುಬಂತು. ಅನೇಕ ಮಕ್ಕಳು ಮರಿ. ತರಾಟೆಗೆ ತೆಗೆದುಕೊಂಡೆ. ಹಾಗೇ ನೋಡು ಇದನ್ನ! ಮಕ್ಕಳು ಮರಿ ಆಗಿಬಿಟ್ಟಿವೆ! ನೆರೆಮನೆಯ ಜನರು ಬಂದು ಅವರನ್ನು ಪೋಷಿಸಿ ಬೆಳಸಿ ಮನುಷ್ಯರನ್ನಾಗಿ ಮಾಡುತ್ತಾರೆಯೆ? ಹೆಂಡತಿ ಮಕ್ಕಳನ್ನು ಮಾವನ ಮನೆಗೆ ಅಟ್ಟಿಬಿಟ್ಟಿದ್ದೇನಲ್ಲ, ಅವರನ್ನು ಬೇರೊಬ್ಬರು ಸಾಕಿಸಲಹುತ್ತಿದ್ದಾರಲ್ಲ ಎಂಬ ನಾಚಿಕೆಯೂ ಆತನಿಗಿರಲಿಲ್ಲ. ಆತನನ್ನು ಚೆನ್ನಾಗಿ ಬೈದು ಹೇಳಿದೆ, ಯಾವುದಾದರೂ ಒಂದು ಉದ್ಯೋಗಕ್ಕೆ ಸೇರಿಕೊ ಅಂತ. ಆಗ ಮಾತ್ರ ಇಲ್ಲಿಂದ ಹೊರಡಲು ಮನಸ್ಸು ಮಾಡಿದ.''

ಸಂಸಾರ ತ್ಯಾಗಕ್ಕೆ ಅಷ್ಟೊಂದು ಉತ್ತೇಜನ ನೀಡುತ್ತಿದ್ದ ಶ್ರೀರಾಮಕೃಷ್ಣರು ಹೀಗೇಕೆ ವರ್ತಿಸಿದರು? ಎಂಬ ಪ್ರಶ್ನೆ ಮೂಡುವುದು ಸಹಜ. ಆದರೆ ಇಲ್ಲಿ ಶ್ರೀರಾಮಕೃಷ್ಣರು ಸಂಸಾರ ತ್ಯಾಗವನ್ನಲ್ಲ ಜವಾಬ್ದಾರಿಯಿಲ್ಲದ ತ್ಯಾಗವನ್ನು ಖಂಡಿಸುತ್ತಿರುವರು. ಪ್ರತಾಪನ ಸಹೋದರನದು ನಿಜವಾದ ವೈರಾಗ್ಯವಲ್ಲ, ಸೋಮಾರಿತನದಿಂದ ಸಂಸಾರ ತಾಪತ್ರಯದಿಂದ ದೂರವಾಗುವ ಪ್ರಯತ್ನ. ಅನೇಕರು ಸಾಧನೆಯ ನೆಪದಲ್ಲಿ ಕೆಲಸದಿಂದ, ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಾರೆ. ಅಂಥವರು ಇಹಪರಗಳೆರಡನ್ನೂ ಕಳೆದುಕೊಳ್ಳುತ್ತಾರೆ. ಸಂಸಾರದ ಜವಾಬ್ದಾರಿಯನ್ನೇ ಹೊರಲಾಗದವರು ಅತ್ಯಂತ ಗುರುತರವಾದ ಆಧ್ಯಾತ್ಮಿಕ ಜವಾಬ್ದಾರಿಯನ್ನು ಹೊರಬಲ್ಲರೆ? ಅವನ ತ್ಯಾಗ ನಿಜವಾಗಿಯೂ ತಾಮಸಿಕವಾಗಿತ್ತು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಮೂರು ಬಗೆಯ ತ್ಯಾಗವನ್ನು ಕುರಿತು ಹೇಳುತ್ತಾನೆ — ತಾಮಸಿಕ, ರಾಜಸಿಕ ಮತ್ತು ಸಾತ್ತ್ವಿಕ:

> **ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ॥**
> **ಮೋಹಾತ್ತಸ್ಯ ಪರಿತ್ಯಾಗಃ ತಾಮಸಃ ಪರಿಕೀರ್ತಿತಃ ॥**
> **ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್ ।**
> **ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥**
> **ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ।**
> **ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ ॥**
> *(೧೮.೭,೮,೯)*

''ನಿತ್ಯಕರ್ಮದ ಸಂನ್ಯಾಸವು ಯುಕ್ತವಲ್ಲ. ಮೋಹದಿಂದ ಅದನ್ನು ತ್ಯಾಗ ಮಾಡುವುದು ತಾಮಸಿಕವಾಗುತ್ತದೆ. ಯಾವನು ಶರೀರಾಯಾಸದ ಭಯದಿಂದ, ಕರ್ಮವು ದುಃಖವೆಂದು ಭಾವಿಸಿ ತ್ಯಾಗ ಮಾಡುತ್ತಾನೊ, ಅದು ರಾಜಸಿಕ ತ್ಯಾಗ ಮತ್ತು ಆ ತ್ಯಾಗವು ನಿಷ್ಫಲವಾಗುತ್ತದೆ. ನಿತ್ಯಕರ್ಮವು ಮಾಡಲ್ಪಡತಕ್ಕದ್ದು ಎಂದು ಭಾವಿಸಿ, ನಿರ್ಲಿಪ್ತನಾಗಿ ಫಲಾಸಕ್ತಿಯಿಲ್ಲದೆ ಮಾಡಲ್ಪಡುತ್ತದೆಯೋ, ಆ ತ್ಯಾಗವು ಸಾತ್ತ್ವಿಕವು.'' ಸಾತ್ತ್ವಿಕ ತ್ಯಾಗಿಯ ಕೆಲವು ಲಕ್ಷಣಗಳನ್ನು ನಾವು ಗುರುತಿಸಬಹುದು.

೧) ತನಗಿಷ್ಟವಿಲ್ಲದ ಕರ್ಮವನ್ನು ದ್ವೇಷಿಸುವುದೂ ಇಲ್ಲ, ಇಷ್ಟವಾದುದಕ್ಕೆ ಅಂಟಿಕೊಳ್ಳುವುದೂ ಇಲ್ಲ. ಇಷ್ಟವಲ್ಲದವುಗಳೇ

ಸೇರಿ ಇಷ್ಟವಾದುದಾಗುತ್ತದೆ. ಉದಾ: ಮೆಣಸಿನಕಾಯಿ, ಎಣ್ಣೆ, ಹಿಟ್ಟು ಮುಂತಾದವುಗಳು ಪ್ರತ್ಯೇಕವಾಗಿ ಯಾರಿಗೂ ಇಷ್ಟವಿಲ್ಲ. ಆದರೆ ಅವೆಲ್ಲವನ್ನೂ ಸೇರಿಸಿದಾಗ ಎಲ್ಲರೂ ಇಷ್ಟಪಡುವ 'ಬೋಂಡ' ವಾಗುತ್ತದೆ.

೨) ಅವನು ಮೇಧಾವಿಯಾಗಿರುತ್ತಾನೆ. ಅವನ ಬುದ್ಧಿ ಅಧ್ಯಾತ್ಮದ ಬೆಳಕಿನಿಂದ ಬೆಳಗುತ್ತಿರುತ್ತದೆ. ವಿದ್ಯುತ್ ಬಲ್ಬಿನೊಳಗಿರುವ ಫಿಲಮೆಂಟ್ ವಿದ್ಯುತ್ತಿನಿಂದ ಬೆಳಗುವಂತೆ. ಅದೂ ಒಂದು ತಂತಿಯೇ ಆದರೂ ಬೇರೆ ತಂತಿಗಳು ಆ ರೀತಿ ಬೆಳಗುವುದಿಲ್ಲ.

೩) ಅವನಲ್ಲಿ ಕರ್ತೃತ್ವ ಬುದ್ಧಿ ಇರುವುದಿಲ್ಲ. ವಿದ್ಯುತ್ತಿನಿಂದ ಯಂತ್ರ ನಡೆಯುವುದಾದೂ ಕೆಲಸ ಮಾತ್ರ ಯಂತ್ರದ್ದು. ಹಾಗೆಯೇ ಆತ್ಮನ ಸಾನ್ನಿಧ್ಯದಿಂದ ದೇಹೇಂದ್ರಿಯ ಮನಸ್ಸೆಂಬ ಯಂತ್ರ ಕೆಲಸ ಮಾಡುತ್ತದೆ. ಆತ್ಮ ಕರ್ತೃವಲ್ಲ. ಆತ್ಮನೊಡನೆ ತನ್ನನ್ನು ಒಂದಾಗಿಸಿಕೊಳ್ಳುವವನು ತಾನು ಕರ್ತೃ ಎಂದು ಭಾವಿಸುವುದಿಲ್ಲ.

ಮೇಲಿನ ಘಟನೆಯನ್ನು ಇನ್ನೊಂದು ದೃಷ್ಟಿಯಿಂದ ನೋಡಬಹುದು. ಇದೊಂದು ನಾಟಕೀಯವಾದ ಪ್ರಸಂಗ. ಶ್ರೀರಾಮಕೃಷ್ಣರು ಪ್ರತಾಪನ ಸಹೋದರನ ಬಗ್ಗೆ ಹೇಳಿದ ತಕ್ಷಣವೇ ''ನಿನಗೆ ವಿವಾಹವಾಗಿದೆಯೆ?'' ಎಂದು ಕೇಳುತ್ತಾರೆ. ಈ ಪ್ರಶ್ನೆಗೆ ಪ್ರತಾಪನ ಸಹೋದರನ ಪ್ರಸಂಗ ಪೀಠಿಕೆಯಾಗಿದೆ ಎಂದು ಹೇಳಬಹುದು. 'ಮ'ರಿಗೆ ಮದುವೆಯೂ ಆಗಿತ್ತು, ಮಕ್ಕಳೂ ಇದ್ದರು. ಪ್ರತಾಪನ ಸಹೋದರನ ಪ್ರಸಂಗವನ್ನು ಕೇಳಿದಾಗ 'ಮ'ರು ಮನಸ್ಸಿನಲ್ಲಿ ಈ ರೀತಿ ಭಾವಿಸಿರಬಹುದು: ಶ್ರೀರಾಮಕೃಷ್ಣರು ಗೃಹಸ್ಥಾಶ್ರಮಕ್ಕೇ ಹೆಚ್ಚು ಪ್ರಾಶಸ್ತ್ಯವನ್ನು ನೀಡುತ್ತಾರೆ, ತಾನು ಸಂಸಾರವಂದಿಗನಾಗಿರುವುದನ್ನು ತಿಳಿದು ಅವರು ಸಂತೋಷಪಡುತ್ತಾರೆ, ಎಂಬುದಾಗಿ. ಆದ್ದರಿಂದ 'ನಿನಗೆ ಮದುವೆಯಾಗಿದೆಯೆ?' ಎಂಬ ಪ್ರಶ್ನೆಗೆ 'ಮ' ಬಹುಶಃ ಹೆಮ್ಮೆಯಿಂದಲೇ, ''ಹೌದು, ಆಗಿದೆ'' ಎಂದು ಉತ್ತರಿಸಿದರು. ''ಓ ರಾಮಲಾಲ! ನೋಡು ಈತ ಆಗಲೇ ವಿವಾಹ ಮಾಡಿಕೊಂಡುಬಿಟ್ಟಿದ್ದಾನೆ'' ಎಂಬ ಪರಮಹಂಸರ ಪ್ರತಿಕ್ರಿಯೆ 'ಮ'ರ ಮೇಲೆ ಎಂಥ ಆಘಾತವನ್ನು ಉಂಟುಮಾಡಿರಬಹುದು ಎಂಬುದನ್ನು ಊಹಿಸಬಹುದು. ಶ್ರೀರಾಮಕೃಷ್ಣರು ಇಷ್ಟಕ್ಕೇ ಸುಮ್ಮನಾಗದೆ, ''ನಿನಗೆ ಮಕ್ಕಳಾಗಿವೆಯೆ?'' ಎಂದು ಬೇರೆ ಕೇಳಬೇಕೇ! 'ಮ'ರಿಗೆ ತಮ್ಮ ಹೃದಯದ ಬಡಿತ ಕೇಳಿಸತೊಡಗಿತು. ನಡುಗುವ ಧ್ವನಿಯಲ್ಲಿ ''ಹೌದು, ಆಗಿವೆ'' ಎಂದರು. ಶ್ರೀರಾಮಕೃಷ್ಣರು ಅತ್ಯಂತ ದುಃಖ ಸೂಚಿಸುತ್ತ ''ನೋಡು, ಈತನಿಗೆ ಮಕ್ಕಳೂ ಆಗಿಬಿಟ್ಟಿವೆ!''

### ಅಹಂ ಮರ್ದನ

ಈಗ 'ಮ'ರ ಅಹಂಕಾರದ ಮೇಲೆ ಎರಡು ಬಲವಾದ ಪೆಟ್ಟು ಬಿದ್ದಂತಾಯಿತು. ಶ್ರೀರಾಮಕೃಷ್ಣರ ಉದ್ದೇಶವೂ ಇದೇ ಆಗಿತ್ತು. ಅಹಂಕಾರವು ನಾಶವಾಗದೆ ಯಾವುದೇ ಉಪದೇಶವು ಮನಸ್ಸಿನಾಳಕ್ಕೆ ಇಳಿಯುವುದಿಲ್ಲ. ಒಬ್ಬ ವ್ಯಕ್ತಿಯು ಬೌದ್ಧ ಧರ್ಮದ ಝೆನ್ ಪಂಥಕ್ಕೆ ಸೇರಿದ ಗುರುವಿನೆಡೆಗೆ ಬಂದು ಉಪದೇಶವನ್ನು ಬೇಡಿದನು. ಗುರು ಅವನನ್ನು ಬರಮಾಡಿಕೊಂಡು ಕುಳ್ಳಿರಿಸಿ, ಅವನಿಗೆ ಚಹಾಪಾನ ಮಾಡಿಸಲು ಒಂದು ಖಾಲಿ ಟೀ ಕಪ್ಪನ್ನು ಅವನಿಗೆ ಕೊಟ್ಟು, ಕೆಟ್ಲ್‌ನಿಂದ ಚಹಾವನ್ನು ಕಪ್ಪಿಗೆ ಸುರಿಯತೊಡಗಿದನು. ಕಪ್ಪು ತುಂಬಿ ಹೊರಗೆ ಚೆಲ್ಲುತ್ತಿದ್ದರೂ ಸುರಿಯುವುದನ್ನು ನಿಲ್ಲಿಸಲಿಲ್ಲ. ಬಂದ ವ್ಯಕ್ತಿಯು, ''ಮಹಾಶಯರೇ ನಿಲ್ಲಿಸಿ, ಚಹಾ ಚೆಲ್ಲಿಹೋಗುತ್ತಿದೆ,'' ಎಂದು ಹೇಳಿದಾಗ, ಗುರು ಹೇಳಿದನು: ''ನೋಡಪ್ಪ ನಿನ್ನ ಅಂತರಂಗದ ಕಪ್ ಅಹಂಕಾರದಿಂದ ತುಂಬಿಹೋಗಿದೆ. ನಾನು ಏನೇ ಉಪದೇಶ ಮಾಡಿದರೂ ಅದು ಚೆಲ್ಲಿಹೋಗುತ್ತದೆ.'' ನಮ್ಮ ಅಂತರಂಗವು ಶೂನ್ಯವಾದಾಗ ಸದ್‌ವಿಚಾರಗಳ ಗಾಳಿ ಒಳನುಗ್ಗುತ್ತದೆ. ಶ್ರೀಕೃಷ್ಣನೂ ಕೂಡ ಗೀತೆಯಲ್ಲಿ ಮೊದಲು ಅರ್ಜುನನ ಅಂತರಂಗವನ್ನು ಚೂರ್ಣ ಮಾಡಿದ ಮೇಲೆಯೇ ಗೀತೋಪದೇಶವನ್ನು ಪ್ರಾರಂಭಿಸಿದುದು. ಅರ್ಜುನನು ತನ್ನ ಯುದ್ಧ ನಿವೃತ್ತಿಗೆ ಅನೇಕ ನೈತಿಕ, ಸಾಮಾಜಿಕ ಹಾಗೂ ತಾತ್ತ್ವಿಕ ಕಾರಣಗಳನ್ನು ನೀಡಿ ತನ್ನನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದನು. ಇದೆಲ್ಲ ತನ್ನ ಹೇಡಿತನವನ್ನು ಸಮರ್ಥಿಸಿಕೊಳ್ಳುವ ಅಸಂಬದ್ಧ ಪ್ರಲಾಪವೆಂದು ತಿಳಿದ ಶ್ರೀಕೃಷ್ಣನು ಅವನ ಅಹಂಕಾರದ ಮೇಲೆ ಬಾಂಬ್ ಎಸೆದನು, **''ಕುತಸ್ತ್ವಾ ಕಶ್ಮಲಮಿದಂ''** *(೨.೨)* ಇತ್ಯಾದಿ ಶ್ಲೋಕಗಳ ಮೂಲಕ. ಕೊನೆಗೆ ಅರ್ಜುನನು ಅವನಿಗೆ ಸಂಪೂರ್ಣ ಶರಣಾದ ಮೇಲೆ *(೨.೭)* ಶ್ರೀಕೃಷ್ಣನು ತನ್ನ ಗೀತೋಪದೇಶವನ್ನು ಪ್ರಾರಂಭಿಸುತ್ತಾನೆ. ಹಾಗೆಯೇ ಶ್ರೀರಾಮಕೃಷ್ಣರು 'ಮ' ಅಹಂಕಾರವನ್ನು ಹೋಗಲಾಡಿಸಿದ ಮೇಲೆ ತಮ್ಮ ಉಪದೇಶವನ್ನು ಪ್ರಾರಂಭಿಸುತ್ತಾರೆ. ***(ಮುಂದುವರಿಯುವುದು)***

## ವ್ಯಾಕುಲತೆ

**ಒ**ಬ್ಬನಿಗೆ ಒಬ್ಬಳು ಮಗಳು ಇದ್ದಳು. ಬಾಲ್ಯದಲ್ಲೇ ಅವಳು ವಿಧವೆಯಾದಳು. ಅವಳಿಗೆ ಗಂಡನ ಪರಿಚಯವೇ ಇರಲಿಲ್ಲ. ಇತರ ಯುವತಿಯರಿಗೆ ಗಂಡಂದಿರು ಇರುವುದನ್ನು ಅವಳು ನೋಡುತ್ತಿದ್ದಳು. ಒಂದು ದಿನ ತನ್ನ ತಂದೆಯನ್ನು, ''ನನ್ನ ಗಂಡ ಎಲ್ಲಿರುವನು?'' ಎಂದು ಕೇಳಿದಳು. ಅದಕ್ಕೆ ತಂದೆ, ''ಗೋವಿಂದನೇ ನಿನ್ನ ಗಂಡ. ನೀನು ಅವನನ್ನು ಕರೆದರೆ ಅವನು ಬರುವನು'' ಎಂದನು. ಈ ಮಾತನ್ನು ಕೇಳಿ ಅವಳು ತನ್ನ ಕೋಣೆಗೆ ಹೋಗಿ ಬಾಗಿಲನ್ನು ಮುಚ್ಚಿ, ''ಗೋವಿಂದ, ನನ್ನ ಬಳಿಗೆ ಬಾ, ನಿನ್ನ ಮುಖವನ್ನು ತೋರು. ನೀನು ಏತಕ್ಕೆ ಬರುವುದಿಲ್ಲ?'' ಎಂದು ವ್ಯಾಕುಲತೆಯಿಂದ ಅತ್ತು ಕರೆದಳು. ಭಗವಂತ ಅವಳ ವ್ಯಾಕುಲತೆಯ ಕರೆಯನ್ನು ಕೇಳಿ ಅವಳಿಗೆ ಪ್ರತ್ಯಕ್ಷನಾದನು.

***('ಕಥೆಗಾರ ರಾಮಕೃಷ್ಣ' ಪುಸ್ತಕದಿಂದ)***